ಹೌಸನ್ನು ಇನ್ನಷ್ಟು ಉತ್ತಮಗೊಳಿಸಲು ಬಯಸುತ್ತೇವೆ.'

'ಈ ಕೆಲಸವನ್ನು ಮಕ್ಕಳು ಚೆನ್ನಾಗಿ ಮಾಡುತ್ತಾರೆ' ಎಂದೆ. ನಿಕೋ ಫಾರ್ಮನ್ನು ಲೂಸಿ ಮತ್ತು ಗ್ರೇಸಿಯೆಡೆಗೆ ಚಾಚಿದ.

ಕಡೆಗೆ ನಿಕೋ ನಮ್ಮೆಲ್ಲರಿಗೂ ಕೈಕುಲುಕಿ ನಮಗೆ ಶುಭವನ್ನು ಹಾರೈಸುತ್ತಾ ಹೊರಟು ಹೋದ. ನಾವೆಲ್ಲರೂ ನಮ್ಮ ನಮ್ಮ ಜಾಗದಲ್ಲಿ ಕೂತೆವು. ಲೂಸಿ, ಗ್ರೇಸಿ ಮತ್ತು ಅಲಾನ್ ಒಟ್ಟಿಗೆ ಕೂತು, ಪರಸ್ಪರ ಚರ್ಚಿಸುತ್ತಾ ಫೀಡ್‌ಬ್ಯಾಕ್ ಫಾರ್ಮ್ ತುಂಬಿಸಲು ಆರಂಭಿಸಿದರು, ನಡುವೆ ನನ್ನ ಅಭಿಪ್ರಾಯವನ್ನು ಸಹ ಕೇಳುತ್ತಿದ್ದರು.

ಫಾರ್ಮ್ ತುಂಬಿಸಿ ಲೂಸಿ ಮತ್ತು ಗ್ರೇಸಿ, ನಾನೊಮ್ಮೆ ಫಾರ್ಮ್ ನೋಡಲು ಅದನ್ನು ನನಗೆ ಕೊಟ್ಟರು. ಆದರೆ ನಾನು ಬೇರೆ ಏನನ್ನೋ ನೋಡುತ್ತಿದ್ದೆ. ಫಾರ್ಮ್‌ನಲ್ಲಿದ್ದ ಹೆಸರಿನ ಕಾಲಂನಲ್ಲಿ 'ಪಾಲ್ ಸ್ಕಾಟ್, ಲೂಸಿ ವಾಲ್ಟರ್, ಗ್ರೇಸಿ ವಾಲ್ಟರ್ ಮತ್ತು ಅಲಾನ್ ವಾಲ್ಟರ್' ಎಂದಿತ್ತು.

ಅಲಾನ್ ಹುಟ್ಟಿದ ಸಂದರ್ಭದಲ್ಲಿ ಸೌಂದ್ರಾ ನನ್ನನ್ನು ಕೇಳಿದ್ದಳು, 'ಒಂದು ವೇಳೆ ಲೂಸಿ ಮತ್ತು ಗ್ರೇಸಿ ತಮ್ಮ ಹೆಸರಿನ ಮುಂದೆ 'ಸ್ಕಾಟ್' ಬದಲು 'ವಾಲ್ಟರ್' ಎಂದಿಟ್ಟುಕೊಂಡರೆ ಅದು ಹೆಚ್ಚು ಉಪಯೋಗಕ್ಕೆ ಬರುತ್ತದೆ, ಅಲ್ಲವೇ?'. ಆಗ ಲೂಸಿ ಮತ್ತು ಗ್ರೇಸಿಗೆ ಏಳು ವರ್ಷಗಳಾಗಿತ್ತು. ಮೂರು ಜನ ಸಹೋದರ ಸಹೋದರಿಯರಿಗೆ ಒಂದೇ ಪರಿವಾರದ ಹೆಸರಿದ್ದರೆ ಉತ್ತಮ. ಆಗ ನಾನು ಧೈರ್ಯ ತೋರುತ್ತಾ ಲೂಸಿ ಮತ್ತು ಗ್ರೇಸಿಗೆ 'ವಾಲ್ಟರ್' ಎಂದು ಅಡ್ಡ ಹೆಸರಿಟ್ಟುಕೊಳ್ಳಲು ಅನುಮತಿಯನ್ನು ಕೊಟ್ಟೆ, ಆದರೆ ಈ ವಿಷಯ ನನ್ನ ಮನಸ್ಸಿಗೆ ಸದಾ ಚುಚ್ಚುತ್ತಿತ್ತು, ಆ ಹೆಸರು ತರ್ಕಬದ್ಧವಾಗಿಲ್ಲ ಎಂದು ಅನ್ನಿಸುತ್ತಿತ್ತು. ಅವರ ಹೆಸರಿನ ಮುಂದೆ ಅವರ ಮಲತಂದೆಯ ಅಡ್ಡ ಹೆಸರು 'ವಾಲ್ಟರ್' ಎಂಬುದನ್ನು ನೋಡಿ ನನಗೆ ತುಂಬಾ ನೋವಾಗುತ್ತಿತ್ತು. ಅದೇ ಅವರು ತಮ್ಮ ತಾಯಿಯ ಕುಲಹೆಸರು 'ಸ್ಮಿಥ್' ಎಂದಿಟ್ಟುಕೊಂಡಿದ್ದರೆ ಅಷ್ಟು ದುಃಖವಾಗುತ್ತಿರಲಿಲ್ಲ.

'ಲೂಸಿ–ಗ್ರೇಸಿ, ನೀವು 'ಸ್ಕಾಟ್' ಆಗಿದ್ದೀರ, 'ವಾಲ್ಟರ್' ಅಲ್ಲ...' ನಾನು ರೇಗಿದೆ, 'ನೀವು ಸ್ಕಾಟ್ ಪರಿವಾರದ ಮಕ್ಕಳು – ಲೂಸಿ ಸ್ಕಾಟ್, ಗ್ರೇಸಿ ಸ್ಕಾಟ್ ಎಂದು ನಿಮ್ಮ ಹೆಸರಿರಬೇಕು, 'ವಾಲ್ಟರ್' ಎಂದೇಕೆ ಅಡ್ಡ ಹೆಸರಿಟ್ಟುಕೊಳ್ಳುತ್ತೀರ?'

'ಪಪ್ಪಾ, ಅಲಾನ್‌ನಿಂದಾಗಿ ನಾವು 'ವಾಲ್ಟರ್' ಎಂದು ಅಡ್ಡ ಹೆಸರನ್ನಿಟ್ಟುಕೊಳ್ಳುತ್ತೇವೆ.'

'ಓಹೋ, ಅಲಾನ್ ಬಗ್ಗೆ ಇಷ್ಟು ಚಿಂತೆಯೇ! ಅಲಾನ್ ತನ್ನ ಹೆಸರಿನ ಮುಂದೆ 'ಸ್ಕಾಟ್' ಎಂದೇಕೆ ಅಡ್ಡ ಹೆಸರನ್ನು ಹಾಕಿಕೊಳ್ಳಲ್ಲ?' ನಾನು ಉತ್ತೇಜಿತನಾಗಿ ಕೇಳಿದೆ.

'ಪಪ್ಪಾ, ಸ್ವಲ್ಪ ಅರ್ಥ ಮಾಡಿಕೊಳ್ಳಿ...' ಲೂಸಿ ತನ್ನ ಹಣೆಯ ಮೇಲೆ ಕೈಯಿಟ್ಟುಕೊಂಡು ಹೇಳಿದಳು, 'ಅಲಾನನ ಮಮ್ಮಿ–ಡ್ಯಾಡಿ ವಿವಾಹಿತರು, ಅವರು ಒಟ್ಟಿಗೆ ಇದ್ದಾರೆ, ಆದರೆ ನಮ್ಮ ಮಮ್ಮಿ–ಡ್ಯಾಡಿಯ ಡಿವೋರ್ಸ್ ಆಗಿದೆ. ನಮಗೆ ಒಂದೂವರೆ ತಿಂಗಳಾದಾಗ ನೀವು ನಮ್ಮನ್ನು ತ್ಯಜಿಸಿದ್ದಿರಿ...'

'ನಾನೆಂದೂ ನಿಮ್ಮನ್ನು ತ್ಯಜಿಸಿಲ್ಲ. ನಿಮ್ಮ ಮಮ್ಮಿಯನ್ನು ತ್ಯಜಿಸಿದ್ದೇನೆ', ನಾನು ತರ್ಕಿಸಿದೆ.

'ಎಲ್ಲಾ ಒಂದೇ' ಲೂಸಿ ಹೇಳಿದಳು.

'ಒಂದೇ ವಿಷಯವಲ್ಲ' ನಾನು ರೇಗಿದೆ.

ಗ್ರೇಸಿ ನನಗೆ ಮೃದುವಾಗಿ ತಿಳಿ ಹೇಳಿದಳು, 'ಡ್ಯಾಡ್, ನಾವು ಮತ್ತು ಅಲಾನ್ ಒಂದೇ ಶಾಲೆಯಲ್ಲಿ ಓದುತ್ತೇವೆ. ಎಲ್ಲರೂ ನಮ್ಮನ್ನು ಸಹೋದರ ಸಹೋದರಿಯರು ಎಂದು ತಿಳಿಯುತ್ತಾರೆ. ಅವನ ಅಡ್ಡ ಹೆಸರು ಬೇರೆ, ನಮ್ಮ ಅಡ್ಡ ಹೆಸರು ಬೇರೆ ಎಂದರೆ ಹೇಗಾಗುತ್ತೆ?'

'ಏನಾದರೂ ಅಗಲಿ. ನೀವು ಸ್ಕಾಟ್ ವಂಶದವರು, ಹೀಗಿರುವಾಗ ವಾಲ್ಟರ್ ಎಂದು ಹಾಕಿಕೊಳ್ಳುವುದರ ಔಚಿತ್ಯವೇನು? ನಿಮ್ಮ ಮಮ್ಮಿ ಸದಾ ನಿಮ್ಮ ಮನಸ್ಸಿನಲ್ಲಿ ನನ್ನ ಬಗ್ಗೆ ವಿಷವನ್ನು ಬಿತ್ತಿದ್ದಾಳೆ'.

'ಈಗ ನೀವು ಮಮ್ಮಿ ಮೇಲೆ ಆರೋಪ ಹೊರಿಸಬೇಡಿ' ಇಬ್ಬರೂ ಸ್ಪಷ್ಟಪಡಿಸಿದರು.

'ಏಕೆ ಹೊರಿಸಬಾರದು? ಆ ಹೆಂಗಸು ನನ್ನ ಮಕ್ಕಳ ಗುರುತನ್ನೇ ಬದಲಾಯಿಸಿದಳು'.

'ನಿಮಗೂ ಮತ್ತು ಮಮ್ಮಿಗೂ ಇದೇ ವ್ಯತ್ಯಾಸವಿದೆ. ಮಮ್ಮಿ ಎಂದೂ ನಿಮ್ಮ ಬಗ್ಗೆ ಅಸಂಬದ್ಧವಾಗಿ ಮಾತಾಡಲ್ಲ. ಆದರೆ ನೀವು ಅವಳ ಬಗ್ಗೆ...'

'ಬಾಯಿ ಮುಚ್ಚಿ' ನಾನು ಗಟ್ಟಿ ಧ್ವನಿಯಲ್ಲಿ ಕಿರುಚಿದೆ, 'ನಿಮ್ಮ ಮಿತಿಯಲ್ಲಿರಿ.'

'ಇಲ್ಲಿ ಯಾರು ಮಿತಿ ಮೀರುತ್ತಿದ್ದಾರೆ?' ಗ್ರೇಸಿ ಮೆಲ್ಲನೆ ಉಸುರಿದಳು.

'ಏನಂದೆ? ನಾನು ಮಿತಿ ಮೀರುತ್ತಿದ್ದೀನಾ...?' ನಾನು ನನ್ನ ಜಾಗದಿಂದ ಎದ್ದು ನಿಂತು, ಸಿಟ್ಟಿನಿಂದ ಏದುಸಿರು ಬಿಡಲಾರಂಭಿಸಿದ್ದೆ.

ಅಲಾನ್ ಆಶ್ಚರ್ಯದಿಂದ ನಾವು ವಾದ ಮಾಡುವುದನ್ನು ನೋಡುತ್ತಿದ್ದ. ಅವನು ತುಂಬಾ ಹೆದರಿದ್ದ. ಕಡೆಗೆ ಅವನು ತನ್ನ ಸಹೋದರಿಯರಿಗೆ ಹೇಳಿದ, 'ಜಸ್ಟ್ ಚೇಂಜ್ ಯುವರ್ ಸರ್‌ನೇಮ್...' ನಂತರ ಅವನೇ ಮೇಜಿನಿಂದ ಫಾರ್ಮ್ ತೆಗೆದುಕೊಂಡು, ಲೂಸಿ ಮತ್ತು ಗ್ರೇಸಿಯ ಹೆಸರಿನ ಮುಂದಿದ್ದ 'ವಾಲ್ಟರ್' ಹೊಡೆದು 'ಸ್ಕಾಟ್' ಎಂದು ಬರೆದ.

'ಅಲಾನ್, ನಿನಗೆ ಅರ್ಥವಾಗಲ್ಲ... ಈ ಫಾರ್ಮ್‌ನಲ್ಲಿ ಸರ್‌ನೇಮ್ ಬದಲಿಸುವುದರಿಂದ ಏನೂ ಆಗುವುದೂ ಇಲ್ಲ' ಲೂಸಿ ದುಃಖದಿಂದ ಹೇಳಿದಳು.

ಲೂಸಿ ಮತ್ತು ಗ್ರೇಸಿ ನಿರಾಶರಾದರು. ತಮ್ಮ ತಂದೆಯ ಈ ನಡವಳಿಕೆ ಸ್ವಲ್ಪವೂ ಉಚಿತವಲ್ಲ ಎಂದು ಅವರಿಗೆ ಅನ್ನಿಸಿತು. ನನ್ನ ಮನಸ್ಸಿಗೆ ಆ ಅಡ್ಡ ಹೆಸರು ಆಘಾತವನ್ನುಂಟು ಮಾಡುತ್ತದೆ ಎಂದು ಅವರಿಗೆ ಅನ್ನಿಸಲಿಲ್ಲ. ಕಡೆಗೆ ಲೂಸಿ ನನ್ನಲ್ಲಿ ಧೈರ್ಯ ತುಂಬುತ್ತಾ ಹೇಳಿದಳು,

'ಡ್ಯಾಡ್, ಒಂದು ಅಡ್ಡ ಹೆಸರಿನಲ್ಲೇನಿದೆ? ಸರಿ. ನಾವು ಕೋರ್ಟಿಗೆ ಹೋಗಿ ನಮ್ಮ ಸರ್‌ನೇಮ್ ಬದಲಾಯಿಸಿಕೊಳ್ಳುತ್ತೇವೆ'.

ಗ್ರೇಸಿ ಯೋಚಿಸುತ್ತಾ ಹೇಳಿದಳು, 'ನಾವು ಗೊಂದಲದಲ್ಲಿದ್ದೆವು. ನಮ್ಮೊಂದಿಗಿರುವ ಡ್ಯಾಡ್ ನಮ್ಮ ಅಸಲಿ ಡ್ಯಾಡ್ ಅಲ್ಲ, ನಾವು ಆಗಾಗ ಭೇಟಿಯಾಗುವ ಡ್ಯಾಡಿಯೇ ನಮ್ಮ ನಿಜವಾದ ಡ್ಯಾಡ್ ಎಂದು ಸಾಕಷ್ಟು ದಿನಗಳ ನಂತರ ನಮಗೆ ತಿಳಿಯಿತು. ನೀವಿಬ್ಬರೂ ನಮ್ಮನ್ನು ಪ್ರೀತಿಸುತ್ತೀರಿ, ಅದಕ್ಕೇ ನಾವು ಯಾರ ಸರ್‌ನೇಮನ್ನೂ ಇಟ್ಟುಕೊಳ್ಳಬಹುದು. ಆದರೆ ನಿಮಗೆ ಇದು ಕೆಡುಕೆಂದು ಅನ್ನಿಸಿದರೆ, ನಾವು ನಮ್ಮ ಅಡ್ಡ ಹೆಸರನ್ನು ಬದಲಾಯಿಸಿಕೊಳ್ಳುತ್ತೇವೆ'.

'ಇದು ಅಷ್ಟು ಸುಲಭವಲ್ಲ...' ಲೂಸಿ ಕೂಡಲೇ ಹೇಳಿದಳು, 'ನಾವು ನಮ್ಮ ಸರ್ಟಿಫಿಕೇಟ್, ಪಾಸ್‌ಪೋರ್ಟ್ ಎಲ್ಲವನ್ನೂ ಹೊಸದಾಗಿ ಮಾಡಿಸಿಕೊಳ್ಳಬೇಕಾಗುತ್ತದೆ... ಆದರೂ ಡ್ಯಾಡ್, ನಾವು ನಮ್ಮ ಸರ್‌ನೇಮನ್ನು ಬದಲಾಯಿಸಿಕೊಳ್ತೀವಿ. ನೀವು ಶಾಂತರಾಗಿ.'

'ಡ್ಯಾಡಿ ರಿಲ್ಯಾಕ್ಸ್!' ಗ್ರೇಸಿ ಧ್ವನಿಗೂಡಿಸಿದಳು.

ನನಗೆ ಒಮ್ಮೆಲೆ, ನಾವು ಮೂರು ವಾರಗಳನ್ನು ಇಲ್ಲಿ ತುಂಬಾ ಆನಂದದಿಂದ ಕಳೆದೆವು, ಅದನ್ನು ಹೀಗೆ ಜಗಳವಾಡಿ ಹಾಳು ಮಾಡಿಕೊಳ್ಳಬಾರದೆಂದು ಅನ್ನಿಸಿತು. ನಾನು ಮೌನ ವಹಿಸಿದೆ. ಅನೇಕ ವಿಷಯಗಳಲ್ಲಿ ನಾವು ಮೌನವನ್ನು ಹೊದ್ದುಕೊಳ್ಳಬೇಕಾಗುತ್ತದೆ. ಯಾವುದೇ ವಿರೋಧ, ಅಭಿಪ್ರಾಯ ಮತ್ತು ಮೌಲ್ಯಮಾಪನವನ್ನು ಮಾಡಬಾರದು; ಮಾಡಿದರೆ ಜೀವನವೊಂದು ರಣಕ್ಷೇತ್ರವಾಗುತ್ತದೆ.

ಸೌಂದ್ರಾ ಮಕ್ಕಳನ್ನು ಬಿಟ್ಟು ಹೋದ ಜಾಗಕ್ಕೇ ಬಂದಿದ್ದಳು. ಮಕ್ಕಳು ನನ್ನ ಕಾರಿನಿಂದ ತಮ್ಮ ತಮ್ಮ ಲಗ್ಗೇಜುಗಳನ್ನು ತೆಗೆದುಕೊಂಡು ಇಳಿದರು. ಲೂಸಿ ಮತ್ತು ಗ್ರೇಸಿ ನನ್ನನ್ನು ತಬ್ಬಿಕೊಂಡು ಭಾವಪೂರ್ಣವಾಗಿ ಬೀಳ್ಕೊಂಡರು. ನನ್ನೆರಡೂ ಗಲ್ಲಗಳಿಗೆ ಮುತ್ತಿಕ್ಕಿದರು. ಅಲಾನ್ ನನಗೆ ಧನ್ಯವಾದ ಹೇಳಿದ, ನಂತರ ತನ್ನ ತಾಯಿಯನ್ನು ತಬ್ಬಿಕೊಂಡ.

ಅವನು ಸೌಂದ್ರಾಳನ್ನು ಅಪ್ಪಿಕೊಂಡಿದ್ದನ್ನು ನೋಡಿ, ಅವನು ತನ್ನ ತಾಯಿಯನ್ನು ತುಂಬಾ ಮಿಸ್ ಮಾಡಿಕೊಂಡಿದ್ದ ಎಂದು ತೋರುತ್ತಿತ್ತು. ಸಮ್ಮರ್ ಹೌಸಿನಲ್ಲಿ ಪರಿಪಕ್ವ ಬಾಲಕನಂತೆ ಕಾಣುತ್ತಿದ್ದ ಅಲಾನ್, ತಾಯಿಯನ್ನು ನೋಡಿದೊಡನೆಯೇ ಮಗುವಾದ; ಸೌಂದ್ರಾ ಅವನನ್ನು ತುಂಬಾ ಪ್ರೀತಿಯಿಂದ ತಬ್ಬಿಕೊಂಡು ಅವನ ತಲೆಯನ್ನು ನೇವರಿಸುತ್ತಿದ್ದಳು.

ನನಗೆ ಸೌಂದ್ರಾಳ ಪತಿ ಸಹ ಬಂದಿದ್ದಾನೆ, ಆದರೆ ಅವನು ಸ್ಟೇರಿಂಗ್ ವ್ಹೀಲ್ ಹಿಡಿದು ಕಾರಿನೊಳಗೇ ಕೂತಿದ್ದಾನೆ, ಹೊರಗೆ ಬರುತ್ತಿಲ್ಲವೆಂದು ಅನ್ನಿಸಿತು. ನಾನು ಅವನನ್ನು ನೋಡುತ್ತಿರುವುದನ್ನು ಗಮನಿಸಿದ ಸೌಂದ್ರಾ ಅವನಿಗೆ ಬರುವಂತೆ ಕರೆದಳು.

'ಎಂಡ್ರೀಯೂ!'

ಕಾರಿನಿಂದ ಸುಂದರ ಪುರುಷನೊಬ್ಬ ಮುಗುಳ್ನಗುತ್ತಾ ಹೊರ ಬಂದ; ಬಂದವನೇ ನನ್ನ ಕೈಕುಲುಕಿದ. ಮೂರು ಮಕ್ಕಳನ್ನು ಸ್ನೇಹದಿಂದ ಮೈದಡವುತ್ತಾ ನನ್ನನ್ನು ಕೇಳಿದ, 'ಇವರು ನಿಮಗೆ ತೊಂದರೆ ಕೊಡಲಿಲ್ಲ ತಾನೇ?'

(ಸಶೇಷ)